ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 09.11.2023

**ಮುಖ್ಯವಿಚಾರಣೆ ಶ್ರೀ ಪಿ ಹೆಚ್ ಎ ವಕೀಲರಿಂದಃ ವಾದಿಯ ಪರವಾಗಿ**

ನಾನು 2 ನೇ ವಾದಿ ಇದ್ದು ನನ್ನ ಮುಖ್ಯ ಸಾಕ್ಷಿಗೆ ಅನುಗುಣವಾಗಿ ನ್ಯಾಯಾಲಯಕ್ಕೆ ಈಗ ನನ್ನ ಪ್ರಮಾಣ ಪತ್ರ ಸಲ್ಲಿಸುತ್ತಿದ್ದು ಅದರಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸತ್ಯವಿರುತ್ತವೆ.

ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಃ

1) 5- ಖಾಸರಾ ಪಹಣಿಗಳನ್ನು ಹಾಜರುಪಡಿಸಿದ್ದು ನಿಪಿ-19 ರಿಂದ 23 ಎಂದು ಗುರುತಿಸಲಾಯಿತು.

2) ಚಂದ್ರಕಾಂತ 1 ನೇ ವಾದಿಯ ವರ್ಗಾವಣೆ ಪ್ರಮಾಣ ಪತ್ರ ಹಾಗೂ 10 ನೇ ತರಗತಿಯ ಅಂಕಪಟ್ಟಿಯನ್ನು ನಿಪಿ-24 ಮತ್ತು 25 ಎಂದು ಗುರುತಿಸಲಾಯಿತು.(ಸದರಿ ಎರಡು ದಾಖಲೆಗಳ ಮೂಲ ಪ್ರತಿಗಳನ್ನು ಅವುಗಳನ್ನು ಝುರಾಕ್ಸ ಪ್ರತಿಗಳ ಜೊತೆ ಹಾಜರುಪಡಿಸಿರುತ್ತಾರೆ ವಾದಿ ಪರ ವಕೀಲರು ಮೂಲ ದಾಖಲೆಗಳನ್ನು ವಾದಿಗೆ ಹಿಂತಿರುಗಿಸಲು ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯ ಆದೇಶದ ಮೇರೆಗೆ ಮೂಲ ಪ್ರತಿಗಳನ್ನು ನಿಶಾನೆ ಎಂದು ಗುರುತಿಸಿ ಅವುಗಳನ್ನು ಝುರಾಕ್ಸ ಪ್ರತಿಗಳಿಗೆ ಹೋಲಿಸಿ ಸದರಿ ಝುರಾಕ್ಸ ಪ್ರತಿಗಳನ್ನು ನಿ.ಪಿ-24(ಎ) ಮತ್ತು 25(ಎ) ಎಂದು ಗುರುತಿಸಲಾಗಿದೆ. ನಂತರ ನಿಪಿ-24 ಮತ್ತು 25 ಮೂಲ ಪ್ರತಿಗಳನ್ನು ವಾದಿಗೆ ಹಿಂತಿರುಗಿಸಲಾಗಿದೆ. ಮುಂದೆ ಅವಶ್ಯಕತೆ ಇದ್ದಲ್ಲಿ ಸದರಿ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸುವುದಾಗಿ ತಿಳಿಸಿರುತ್ತಾರೆ)

**ಪಾಟೀಸವಾಲಿಗೆ ಶ್ರೀ ಎಸ ಎನ ಎನ ವಕೀಲರಿಂದಃ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಕುಷ್ಟಗಿ